ತಹಸೀಲ್ದಾರ್‌ಗೆ ಅಧಿಕಾರ ಕೊಟ್ಟಮೇಲೆ, ಅವರು ಯಾವುದು ಟ್ಯಾಕ್ಸ್ ಸಂಗ್ರಹ ಮಾಡುವುದಿಲ್ಲ. ಸುಳ್ಯ ಮತ್ತು ಪುತ್ತೂರು ತಾಲ್ಲೂಕಿಗೆ ಓಡಾಟ ಮಾಡುತ್ತಿದ್ದಾರೆ. ಅದಕ್ಕಾಗಿ ಒಂದು ಚುನಾವಣೆ ಮಾಡಿ. ಇದರ ಬಗ್ಗೆ ಸ್ಪಷ್ಟವಾಗಿ ಹೇಳಿ.

ಶ್ರೀ ಆರ್.ಬಿ. ತಿಮ್ಮಾಪುರ್:— ಅಸಿಸ್ಟೆಂಟ್ ಕಮೀಷನರ್ ಅವರ ಚಾರ್ಜ್‌ನ್ನು ತೆಗೆದು ಹಾಕಿ ಬಹುಶಃ ಒಂದೆರಡು ತಿಂಗಳು ಆಗಿರಬಹುದು. ಈ ಎರಡು ತಿಂಗಳಿನಲ್ಲಿ ಏನು ಸೆಟ್ಟುಕಡಿಮೆಯಾದರೆ ಎನ್ನುವ ರಿಪೋರ್ಟ್ ತರಿಸುತ್ತೇನೆ. ಆನಂತರ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್:— ಮಾನ್ಯ ಅಧ್ಯಕ್ಷರೆ, ರೋಡ್‌ಗಾಗಿ ಎ.ಪಿ.ಎಂ.ಸಿಗಳಿಗೆ ಏನು ಸಾಲ ಕೊಟ್ಟಿತ್ತು ಅದನ್ನು ಮಾರುಕಟ್ಟೆ ಬೋರ್ಡ್‌ನಿಂದ ಅನುದಾನವಾಗಿ ಕೊಡಬೇಕೆಂದು ಹಿಂದೆ ತೀರ್ಮಾನ ಮಾಡಿತ್ತು. ಆದರೆ, ಅದು ಆದೇಶವಾಗಲಿಲ್ಲ. ಸಣ್ಣ ಸಣ್ಣ ಮಾರುಕಟ್ಟೆ ಸಂಸ್ಥೆಗಳಿಗೆ ಕೆಲಸವೇ ಇಲ್ಲ. ಎಲ್ಲಾ ಇದೇ ರೀತಿ ಸಾಲ ತುಂಬುವುದೇ ಆಗಿದೆ. ದಯವಿಟ್ಟು ಅದನ್ನು ತಾವು ಅನುದಾನವಾಗಿ ಪರಿವರ್ತನೆ ಮಾಡುತ್ತೀರಾ?

ಶ್ರೀ ಆರ್.ಬಿ. ತಿಮ್ಮಾಪುರ್:— ಮಾನ್ಯ ಅಧ್ಯಕ್ಷರೇ, ಬೋರ್ಡ್ ಮುಖಾಂತರ ನಾವು ಅದನ್ನು ಸಾಲದ ರೂಪದಲ್ಲಿ ಕೊಟ್ಟಿಲ್ಲ. ಕೆಲವು ಎ.ಪಿ.ಎಂ.ಸಿಗಳಿಗೆ ಎಲ್ಲಿ ಹೆಚ್ಚಿನ ಹಣ ಇತ್ತು ಆ ಹಣವನ್ನು ಅಲ್ಲಿ ಸಾಲದ ರೂಪದಲ್ಲಿ ಕೊಟ್ಟಿದ್ದೇವೆ. ಸಂಸ್ಥೆಯವರಿಗೆ ನಾವು ಹಣ ಕೊಡಬೇಕಾಗುತ್ತದೆ. ಒಟ್ಟಾರೆ ಹಣವನ್ನು ಬೋರ್ಡ್ ಮುಖಾಂತರ ತುಂಬಬೇಕು ಅಷ್ಟು ಹಣ ಬೋರ್ಡ್‌ನಲ್ಲಿ ಇವತ್ತಿನ ದಿವಸ ಇಲ್ಲ. ಅದನ್ನು ಯಾವ ರೀತಿ ಮಾಡಬೇಕು. ಎನ್ನುವುದರ ಬಗ್ಗೆ ಮಾನ್ಯ ಪಾಟೀಲರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಸೂಕ್ಷ್ಮತೆಯಿಂದ ಪರಿಶೀಲಿಸುತ್ತೇನೆ.

ಹುಲಸೂರು ಕ್ಷೇತ್ರದಿಂದ ಬೆಂಗಳೂರು ನಗರಕ್ಕೆ ಬಸ್ಸು ಸೌಲಭ್ಯಗಳು.

487(4552) ಶ್ರೀ ರಾಜೇಂದ್ರ ವರ್ಮ (ಹುಲಸೂರ):— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಲಸೂರು ಮತಕ್ಷೇತ್ರದ ಕೇಂದ್ರ ಸ್ಥಾನದಿಂದ ನೇರವಾಗಿ ಬೆಂಗಳೂರು ನಗರಕ್ಕೆ ಬರಲು ಯಾವುದೇ ಎಕ್ಸ್‌ಪ್ರೆಸ್ ಇಲ್ಲವೆ ಅಲ್ಟ್ರಾ ಡೀಲಕ್ಸ್ ಬಸ್ಸಿನ ಸೌಲಭ್ಯವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು

ಆ) ಈ ಸ್ಥಳದಿಂದ ಬೆಂಗಳೂರಿಗೆ ಪ್ರಯಾಣ ಮಾಡಬೇಕಾದ ಪ್ರಯಾಣಿಕರು ಬಸವಕಲ್ಯಾಣ ಇಲ್ಲವೆ ಹುಮ್ನಾಬಾದಿಗೆ ಬರುವ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಹುಲಸೂರು ಕೇಂದ್ರ ಸ್ಥಾನದಿಂದ ಬೆಂಗಳೂರು ನಗರಕ್ಕೆ ನೇರ ಬಸ್ಸಿನ ಸಂಪರ್ಕವನ್ನು ಕಲ್ಪಿಸಲು ಸರ್ಕಾರ ಪರಿಶೀಲಿಸುವುದೇ;

ಈ) ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳಿಗೆ ಬಸ್ ನಿಲ್ದಾಣದ ಸೌಕರ್ಯವನ್ನು ಕಲ್ಪಿಸಲಾಗಿದೆಯೇ ಇನ್ನೂ ಎಷ್ಟು ಗ್ರಾಮಗಳಿಗೆ ಬಸ್ ನಿಲ್ದಾಣದ ಸೌಕರ್ಯ ಕಲ್ಪಿಸಬೇಕಾಗಿದೆ ಈ ಸೌಕರ್ಯಗಳನ್ನು ಎಂದು ಕಲ್ಪಿಸಲಾಗುವುದು?

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ (ಸಾರಿಗೆ ಸಚಿವರು) :—

ಅ) ಹೌದು.

ಹುಲಸೂರು ಬಸವಕಲ್ಯಾಣ ತಾಲ್ಲೂಕಿನಲ್ಲಿ ಒಂದು ಹೋಬಳಿ ಕೇಂದ್ರಸ್ಥಾನ. ಇದು ಬಸವಕಲ್ಯಾಣದಿಂದ 19 ಕಿ.ಮೀ. ಭಾಲ್ಕಿಯಿಂದ 27 ಕಿ.ಮೀ. ದೂರದಲ್ಲಿರುತ್ತದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸವಕಲ್ಯಾಣದಿಂದ ಬೆಂಗಳೂರಿಗೆ ಒಂದು ವೇಗದೂತ ಸಾರಿಗೆ, ಒಂದ ಡೀಲಕ್ಸ್ ಸಾರಿಗೆ ಆಚರಿಸುತ್ತಿದೆ. ವೇಗದೂತ ಸಾರಿಗೆ ಗುಲ್ಬರ್ಗಾ, ಚಿತ್ರದುರ್ಗ ಮಾರ್ಗ ಡೀಲಕ್ಸ್ ಸಾರಿಗೆ ಹುಮನಾಬಾದ್, ಹೈದರಾಬಾದ್ ಮಾರ್ಗ ಕ.ರಾ.ರ.ಸಾ.ಸಂಸ್ಥೆಯು ಭಾಲ್ಕಿಯಿಂದ ಕೂಡ ಡೀಲಕ್ಸ್ (ಅಲ್ಟ್ರಾ ಡೀಲಕ್ಸ್ ಪ್ಲಸ್) ಸಾರಿಗೆಯನ್ನು ಬೀದರ್, ಹೈದರಾಬಾದ್ ಮಾರ್ಗ ಬೆಂಗಳೂರಿಗೆ ಸಂಚರಿಸುತ್ತಿದೆ. ಹುಲಸೂರು ಪ್ರಯಾಣಿಕರು ಅನುಕೂಲಕ್ಕೆ ತಕ್ಕಂತೆ ಬೆಂಗಳೂರಿಗೆ ಹೋಗಲು ಈ ಸಾರಿಗೆಗಳಿಂದ ಬಸವಕಲ್ಯಾಣ ಅಥವಾ ಭಾಲ್ಕಿಯಿಂದ ಪ್ರಯಾಣ ಮಾಡಬಹುದಾಗಿದೆ.

ಆ) ಹೌದು

ಇ) ಸದ್ಯಕ್ಕಿಲ್ಲ.

ಈ) ಹುಲಸೂರು ಮತಕ್ಷೇತ್ರದಲ್ಲಿ ಒಟ್ಟು 98 ಗ್ರಾಮಗಳಿದ್ದು ಈ ಪೈಕಿ ದೊಡ್ಡ ಗ್ರಾಮಗಳಾದ ಹುಲಸೂರು ಹಳ್ಳಿಖೇಡ-ಬಿ, ಮತ್ತು ಹಳ್ಳಿಖೇಡ ಸಕ್ಕರೆ ಕಾರ್ಖಾನೆ ಎದುರು ಬಸ್ ನಿಲ್ದಾಣಗಳನ್ನು ನಿರ್ಮಿಸಲಾಗಿದೆ. 15 ಗ್ರಾಮಗಳಲ್ಲಿ ಸರ್ಕಾರದ ವತಿಯಿಂದ ಮಾರ್ಗಬದಿಯ ತಂಗುದಾಣಗಳನ್ನು ನಿರ್ಮಿಸಲಾಗಿದೆ. ಉಳಿದ ಗ್ರಾಮಗಳಲ್ಲಿ ಮಾರ್ಗಬದಿಯ ತಂಗುದಾಣಗಳನ್ನು ಸರ್ಕಾರದಿಂದ, ಸಂಘ ಸಂಸ್ಥೆಗಳಿಂದ ನಿರ್ಮಿಸುವ ಬಗೆಗೆ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ರಾಜೇಂದ್ರ ವರ್ಮ :— ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವುದು ಒಂದಾದರೆ ಅವರು ಹೇಳುವುದು ಒಂದಾಗಿದೆ. ನಾನು ಹುಲಸೂರು ಮತ್ತು ಬೆಂಗಳೂರಿಗೆ ಬರುವುದಕ್ಕೆ

ಎಕ್ಸ್‌ಪ್ರೆಸ್ ಬಸ್ ಸೌಲಭ್ಯ ಮಾಡಿಕೊಡಿ ಎಂದು ಕೇಳಿದರೆ, ಮಾನ್ಯ ಮಂತ್ರಿಗಳು ಬಸವಕಲ್ಯಾಣ ಹುಮ್ನಾಬಾದ್ ಭಾಲ್ಕಿಯಿಂದ ಬರಬಹುದೆಂದು ಹೇಳುತ್ತಿದ್ದಾರೆ. ಇಷ್ಟು ದಿವಸಗಳಾದರೂ ಅಲ್ಲಿಗೆ ಎಕ್ಸ್‌ಪ್ರೆಸ್ ಬಿಡದಿರುವಾಗ ಅಲ್ಲಿನ ಜನರು ಯಾವ ರೀತಿ ಹೋಗಬೇಕೆಂದು ತಿಳಿಯುತ್ತಿಲ್ಲ. ಮಾನ್ಯ ಮಂತ್ರಿಗಳು ಇದಕ್ಕೆ ಸರಿಯಾದಂತಹ ಉತ್ತರವನ್ನು ಕೊಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಕೊಟ್ಟಿರುವ ಉತ್ತರ ಸರಿಯಾಗಿದೆ. ಅವರು ಕೇಳಿರುವಂತಹ ಮೊದಲನೆ ಪ್ರಶ್ನೆಗೆ ಉತ್ತರವಾಗಿ ನಾವು ಹುಲಸೂರು, ಬಸವಕಲ್ಯಾಣ ತಾಲ್ಲೂಕಿನಲ್ಲಿ ಒಂದು ಹೋಬಳಿ ಆಗಿರುವಂತಾದ್ದು. ಅದು ಮಾನ್ಯ ಶಾಸಕರ ಕ್ಷೇತ್ರ. ಬಸವ ಕಲ್ಯಾಣ ಅಲ್ಲಿಂದ ಕೇವಲ 19 ಕಿಲೋಮೀಟರ್ ದೂರ ಇದೆ. ಅಲ್ಲಾ ಡೀಲಕ್ಸ್ ಅಥವಾ ಎಕ್ಸ್‌ಪ್ರೆಸ್ ಇರಬಹುದು, ನಮಗೆ ಅಗತ್ಯವಾಗಿ ದುರಸ್ತಿ ಮಾಡಬೇಕಾದಂತಹ ಸಂದರ್ಭದಲ್ಲಿ ಅಲ್ಲಿ ಗ್ಯಾರೇಜ್‌ಗಳು ಇಲ್ಲದೆ ಇರುವುದರಿಂದ ಬೆಂಗಳೂರು ಈ ಹುಲಸೂರು ಗ್ರಾಮದಿಂದ ಬಸ್ ವ್ಯವಸ್ಥೆ ಮಾಡುವುದಕ್ಕೆ ಕಷ್ಟವಾಗುತ್ತದೆ. ಅವರು ಎಕ್ಸ್‌ಪ್ರೆಸ್ ಬಿಡಬೇಕೆಂದು ಕೇಳಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡಿ ಶಾಸಕರ ಮತಕ್ಷೇತ್ರದಿಂದ ಬೆಂಗಳೂರಿಗೆ ಬರುವುದಕ್ಕೆ ನನ್ನ ಸಂಸ್ಥೆಯಿಂದ ಎಕ್ಸ್‌ಪ್ರೆಸ್ ಇರಬಹುದು ಅಥವಾ ಕೆಂಪು ಬಸ್ಸು ಇರಬಹುದು ಒಂದು ಬಸ್ಸನ್ನು ಒದಗಿಸಿಕೊಡುತ್ತೇವೆನ್ನುವ ಭರವಸೆಯನ್ನು ಕೊಡುತ್ತಿದ್ದೇನೆ.

ಶ್ರೀ ರಾಜೇಂದ್ರ ವರ್ಮ :— ಮಾನ್ಯ ಅಧ್ಯಕ್ಷರೆ, ಇನ್ನು ನಾನು ಕೇಳಿರುವಂತಹ ಎರಡನೇ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಹುಲಸೂರು, ಹಳ್ಳಿಖೇಡ್-ಬಿ, ಹಳ್ಳಿಖೇಡ್ ಸಕ್ಕರೆ ಕಾರ್ಖಾನೆ ಎದುರು ಬಸ್ ಸ್ಟಾಂಡ್‌ಗಳನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಆ ಬಸ್ ಸ್ಟಾಂಡ್ ಗಳಲ್ಲಿ ಜನರಿಗೆ ಬೇಕಾದಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟಿಲ್ಲ. ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ, ಕ್ಯಾಂಟೀನ್ ವ್ಯವಸ್ಥೆ ಇಲ್ಲ. ಏಕೆಂದರೆ ಲಕ್ಷಗಟ್ಟಲೆ ದುಡ್ಡು ಖರ್ಚು ಮಾಡಿ ಅಲ್ಲಿ ಕಟ್ಟಡ ಹಾಗೆ ಬಿಟ್ಟಿದ್ದಾರೆ. ಬಳಕೆ ಆಗುತ್ತಿಲ್ಲ. ಅಲ್ಲಿ ಜಾನುವಾರು ಕಟ್ಟಿಕೊಂಡಿದ್ದಾರೆ. ಅದನ್ನು ಏನು ಮಾಡುತ್ತೀರಿ ಎಂದು ಮಾನ್ಯ ಮಂತ್ರಿಗಳು ಹೇಳಬೇಕಾಗುತ್ತದೆ. ನಮ್ಮ ಕ್ಷೇತ್ರದಲ್ಲಿ ಇನ್ನು 32 ಹಳ್ಳಿಗಳಲ್ಲಿ ಬಸ್ ಓಡುವಂತಹ ಸೌಲಭ್ಯ ಮಾಡಿಲ್ಲ. ಅದಕ್ಕಾಗಿ ಆ ಹಳ್ಳಿಗಳಿಗೆ ಯಾವಾಗ ಬಸ್ಸಿನ ವ್ಯವಸ್ಥೆ ಮಾಡುತ್ತೀರಿ? ಇನ್ನು ಮೂರನೆಯದಾಗಿ ನಮ್ಮಲ್ಲಿ ಗೊಡವಾಡಿ ಇಸ್ಮಾಯಿಲ್ ಖಾದ್ರಿ ದೇವಸ್ಥಾನವೆಂದು ಬಹಳ ಫೇಮಸ್ ಆದಂತಹ ಊರು ಇದೆ. ಅಲ್ಲಿಗೆ ಇಡೀ ದೇಶದಲ್ಲಿ ಇರತಕ್ಕಂಥ ಭಕ್ತಾದಿಗಳು ಬರುತ್ತಿದ್ದಾರೆ. ರಾಜಸ್ಥಾನ್ ಇರಬಹುದು, ಮಧ್ಯಪ್ರದೇಶ ಇರಬಹುದು, ಅಥವಾ ಗುಜರಾತ್ ಇರಬಹುದು, ಮಹಾರಾಷ್ಟ್ರದವರು ಇರಬಹುದು ಮತ್ತೆ ಆಂಧ್ರ ಪ್ರದೇಶ, ಇತರ ರಾಜ್ಯಗಳಿಂದ ಜನರು ಬರುತ್ತಿರುತ್ತಾರೆ. ಅಲ್ಲಿ ಒಂದು ಬಸ್ ಸ್ಟಾಂಡ್‌ನ ಸೌಕರ್ಯವಿಲ್ಲ. ಆದುದರಿಂದ, ಮಾನ್ಯ ಮಂತ್ರಿಯವರು ಈ

ಸೌಕರ್ಯವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅವರು ಸಹ ಬ್ಯಾಕ್‌ವರ್ಡ್, ಮೈನಾರಿಟಿಯಲ್ಲಿ ಬರುತ್ತಾರೆ, ನಮ್ಮ ಕ್ಷೇತ್ರ ಸಹ ರಿಜರ್ವ್ ಕಾನ್ಸ್ಟಿಟ್ಯೂಯೆನ್ಸಿಗೆ ಸಂಬಂಧಪಟ್ಟಿರುವಂಥಾದ್ದು. ಅಲ್ಲಿ ಜನರು ಬಸ್ಸುಗಳಿಗೆ ಓಡಾಡುವಂತಹ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆದುದರಿಂದ, ನಮಗೆ ಈ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು :— ಮಾನ್ಯ ಮಂತ್ರಿಯವರೆ, ಈ ಕ್ಷೇತ್ರ ರಿಸರ್ವ್ ಕಾನ್ಸ್ಟಿಟ್ಯೂಯೆನ್ಸಿ ಇಲ್ಲಿ ಹೆಚ್ಚಿಗೆ ಸೌಲಭ್ಯ ಕೊಡುವಂತಹ ವಿಷಾಡು ಮಾಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ನನಗೂ ಸವಲತ್ತುಗಳನ್ನು ಒದಗಿಸಿಕೊಂಡುವುದರ ಬಗ್ಗೆ ಆಸಕ್ತಿ ಇದೆ. ಮಾನ್ಯ ಸದಸ್ಯರು ಒಂದು ವಿಚಾರವನ್ನು ತಮ್ಮ ಗಮನಕ್ಕೂ ಹಾಗೂ ನನ್ನ ಗಮನಕ್ಕೂ ತಂದಿದ್ದಾರೆ. ರಾಜ್ಯದಾದ್ಯಂತ ಬಸ್ ನಿಲ್ದಾಣಗಳಲ್ಲಿ ನಾಗರೀಕ ಸವಲತ್ತುಗಳನ್ನು ಒದಗಿಸಿಕೊಡುವುದರ ವಿಚಾರವಾಗಿ ಈಗಾಗಲೇ ನಾನು ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇನೆ. ಈಗ ಸಿ.ಐ.ಆರ್.ಟಿ.ಓ.ಎನ್ನುವಂತಹ ಒಂದು ಸಂಸ್ಥೆ ಪುಣೆಯಲ್ಲಿ ಇದೆ. ಈ ಸಂಸ್ಥೆಯ ಮುಖಾಂತರ ರಾಜ್ಯದಾದ್ಯಂತ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಉತ್ತಮ ರೀತಿಯ ನಾಗರೀಕ ಸವಲತ್ತುಗಳನ್ನು ಒದಗಿಸಿಕೊಡುವುದರ ಬಗ್ಗೆ ಒಂದು ಸಮೀಕ್ಷೆಯನ್ನು ನಾವು ಪ್ರಾರಂಭ ಮಾಡಿದ್ದೇವೆ. ಇದರ ಅಂತಿಮ ವರದಿ ಈ ತಿಂಗಳ ಕೊನೆಯಲ್ಲಿ ಬರುವ ಸಾಧ್ಯತೆಗಳು ಇವೆ. ಈ ರಾಜ್ಯದ ಎಲ್ಲಾ ಬಸ್ ನಿಲ್ದಾಣಗಳಲ್ಲಿ ನಾಗರೀಕ ಸವಲತ್ತುಗಳು ಅವು ಕುಡಿಯುವ ನೀರು ಇರಬಹುದು, ಸ್ವಚ್ಛತೆಯನ್ನು ಕಾಪಾಡಿಕೊಂಡು ಹೋಗುವಂಥಾದ್ದು ಇರಬಹುದು, ವ್ಯವಸ್ಥಿತವಾದಂತಹ ಶೌಚಾಲಯಗಳನ್ನು ಒದಗಿಸಿಕೊಂಡುವಂಥಾದ್ದು ಇರಬಹುದು, ಈಗ ವರದಿ ಏನು ಬರಬೇಕಾಗಿದೆ, ಅದರ ಆಧಾರದ ಮೇಲೆ ಯಾವ್ಯಾವ ಬಸ್ ನಿಲ್ದಾಣಗಳಲ್ಲಿ ಈ ನಾಗರೀಕ ಸವಲತ್ತುಗಳ ಕೊರತೆ ಇರುವಂತಹ ಕಡೆಗಳಲ್ಲಿ, ನಿವಾರಣೆ ಮಾಡಬೇಕೆಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಎರಡನೆಯದಾಗಿ ಮಾನ್ಯ ಸದಸ್ಯರು ಬಸ್ ಸಂಚಾರ 35 ಗ್ರಾಮಗಳಲ್ಲಿ ಇಲ್ಲದೇ ಇರುವುದರಿಂದ ಇಲ್ಲಿ ಸಂಚಾರವನ್ನು ಪ್ರಾರಂಭ ಮಾಡಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ತಮಗೂ ಮತ್ತು ಮಾನ್ಯ ಸದಸ್ಯರಿಗೂ ಗೊತ್ತಿದೆ, ನಾನು ಈ ಹಿಂದೆ ಅನೇಕ ಪ್ರಶ್ನೆಗಳಿಗೆ ಉತ್ತರವನ್ನು ನೀಡುವಂತಹ ಸಂದರ್ಭದಲ್ಲಿ, ರಾಜ್ಯದಲ್ಲಿ ಇನ್ನು ಆಗಿದಿರುವಂತಹ ಹಳ್ಳಿಗಳಲ್ಲಿ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿಕೊಳ್ಳುವುದರ ಬಗ್ಗೆ ರಸ್ತೆ ಸಂಚಾರಿಗಳಿಗೆ ದಾಖಲೆಯಾಗಬೇಕಾಗಿರುವಂಥಾದ್ದು, ಸಂಚಾರವನ್ನು ಕಲ್ಪಿಸಿಕೊಡುವುದರ ಬಗ್ಗೆ ಕೆಲವು ಸಮಸ್ಯೆಗಳು ಕಂಡುಬಂದಿರುವುದರಿಂದ ಅಲ್ಲಿ ಬಸ್ ಸಂಚಾರವಾಗುವುದರ ಬಗ್ಗೆ ಅಸ್ಪಷ್ಟತೆ ಇದೆ. ಆದುದರಿಂದ, ವ್ಯವಸ್ಥಿತವಾದಂತಹ ರಸ್ತೆಗಳನ್ನು ಈ ಗ್ರಾಮಗಳಲ್ಲಿ ಮಾಡಿದಲ್ಲಿ ಬಸ್ಸಿಗೆ ಸಂಚಾರಕ್ಕೆ ಕೊಡುವುದರ ಬಗ್ಗೆಯೂ ನನ್ನ ಜವಾಬ್ದಾರಿಯಾಗಿರುತ್ತದೆ.

ಈ ರಸ್ತೆಗಳು ವ್ಯವಸ್ಥಿತವಾದರೆ ಬಸ್‌ಗಳ ಸಂಚಾರಕ್ಕೂ ವ್ಯವಸ್ಥೆಯಾಗುತ್ತದೆ. ಮತ್ತು ಇಸ್ಮಾಯಿಲ್ ಖಾದ್ರಿ ಎಂಬ ಈ ದೇಮಸ್ಥಾನಕ್ಕೆ ಬಸ್‌ನ ಸೌಕರ್ಯವಿಲ್ಲವೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ತಾವು ಇದರ ವಿವರವಾದ ಮಾಹಿತಿಯನ್ನು ಬರವಣಿಗೆಯಲ್ಲಿ ನೀಡಿ, ನಾನು ತಕ್ಷಣವೇ ಈ ಜಾಗಕ್ಕೆ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿಕೊಡುತ್ತೇನೆ.

ಶ್ರೀ ರಾಜೇಂದ್ರ ವರ್ಮ :— ಮಾನ್ಯ ಅಧ್ಯಕ್ಷರೆ, ಹಿಂದೆ ಸರ್ಕಾರವಿದ್ದಾಗ ಮಹಾರಾಷ್ಟ್ರಕ್ಕೆ ಹೋಗುವಂತಹ ಬಸ್ ಬೀದರ್, ಭಾಲ್ಕಿಗೆ ಹೋಗುವಂತಹ ಬಸ್‌ಗಳು ಹುಲಸೂರು ಮುಖಾಂತರ ಹಾದು ಹೋಗುತ್ತಿದ್ದವು. ಈಗ ಆ ಬಸ್‌ಗಳು ಪಂಡರಾಪುರ ಮತ್ತು ತುಳಜಾಪುರಕ್ಕೆ ಹೋಗುವಂತಹ ಬಸ್‌ಗಳನ್ನು ಡೈವರ್ಟ್ ಮಾಡಿದ್ದಾರೆ. ಇವು ಹುಲಸೂರ್ ಮುಖಾಂತರ ಹಾದು ಹೋಗಬೇಕು, ಇನ್ನೊಂದು ವಿಚಾರವೇನೆಂದರೆ, ಬೀದರ್‌ನಿಂದ ಹಳ್ಳಿಖೇಡ ಮುಖಾಂತರವಾಗಿ ಅಂದರೆ ಅವು ಗುಲ್ಬರ್ಗಾ ಆಗಲಿ, ಬೆಂಗಳೂರು ಬಸ್ ಆಗಲಿ, ಹೊನ್ನಾವರಕ್ಕೆ ಆಗಲಿ ಎಲ್ಲಾ ಎಕ್ಸ್‌ಪ್ರೆಸ್ ಬಸ್‌ಗಳು ಊರ ಮುಖಾಂತರ ಹಾದು ಹೋಗುತ್ತಿದ್ದವು ಏಕೆಂದರೆ ಹಳ್ಳಿಖೇಡ ಗ್ರಾಮ ಇಡೀ ರಾಜ್ಯದಲ್ಲಿ 41 ಗ್ರಾಮ ಪಂಚಾಯತ್ ಸದಸ್ಯರುಗಳು ಇರುವಂತಹ ಹಳ್ಳಿಯಾಗಿದೆ. ಅಲ್ಲಿ ಬೈಪಾಸ್ ರೋಡ್‌ನಿಂದ ಹೋಗುತ್ತವೆ, ಇಲ್ಲಿ ಈ ಎಲ್ಲಾ ಬಸ್‌ಗಳು ಹಳ್ಳಿಖೇಡ ಹಳ್ಳಿಯ ಮುಖಾಂತರ ಹೋಗಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಗುಂಡಪ್ಪ ವಕೀಲ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಮಾತನಾಡುವಂತಹ ಸಂದರ್ಭದಲ್ಲಿ ರಸ್ತೆ ದುರಸ್ಥಿಯನ್ನು ಮಾಡಿಕೊಟ್ಟರೆ ನಾವು ಬಸ್ ಸಂಚಾರಕ್ಕೆ ವ್ಯವಸ್ಥೆ ಮಾಡಿಕೊಡುತ್ತೇವೆಂದು ಹೇಳಿದರು. ತಾವು ಯಾವ್ಯಾವ ರಸ್ತೆಗಳು ಕೆಟ್ಟು ಹೋಗಿದೆ ಎಂಬ ಬಗ್ಗೆ ನಿಮ್ಮ ಇಲಾಖೆಗೆ ತಿಳಿದರೆ ನೀವು ಲೋಕೋಪಯೋಗಿ ಇಲಾಖೆಗೆ ಪತ್ರ ಬರೆದು ಅದರ ಕಾಪಿಯನ್ನು ದಯಮಾಡಿ ನಮಗೆ ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೆಲವು ಬಸ್‌ಗಳು ಹುಲಸೂರ್ ಮೇಲೆ ಸಂಚಾರ ಮಾಡುವುದಕ್ಕೆ ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಪತ್ರವನ್ನು ಕೊಡಲಿ ಅದಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆ ಈ ವಿಚಾರದ ಬಗ್ಗೆ ನಾನು ಡಿ.ಸಿ.ಯವರಿಗೆ, ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮಾರ್ಗದರ್ಶನವನ್ನು ನೀಡುವುದರ ಜೊತೆಗೆ ಆ ಗ್ರಾಮದಿಂದ ಬಸ್ ಸಂಚಾರವಾಗುವಂತಹ ವ್ಯವಸ್ಥೆಯನ್ನು ಮಾಡಿಕೊಡುತ್ತೇನೆ. ಇನ್ನು ಮಾನ್ಯ ಶಾಸಕರು ಇಡೀ ರಾಜ್ಯದಲ್ಲಿ, ಮತ್ತೆ ಅವರಿಗೆ ಸಂಬಂಧಪಟ್ಟಂತಹ ಬೀದರ್ ಜಿಲ್ಲೆಯಲ್ಲಿ ಕೆಲವು ರಸ್ತೆಗಳು ಕೆಟ್ಟುಹೋಗಿರುವುದರ ಬಗ್ಗೆ ಹೇಳಿದರು. ನಾನು ಇದಕ್ಕೆ ಹೇಳುವಂಥಾದ್ದು ಏನೆಂದರೆ ತಮ್ಮ ಜಿಲ್ಲೆಗೆ ಸಂಬಂಧಪಟ್ಟಂತಹ ರಸ್ತೆಗಳ ದುರಸ್ತಿ ಬಗ್ಗೆ ತಮ್ಮ ಹತ್ತಿರ ಮಾಹಿತಿ ಇರುತ್ತವೆ. ನಮ್ಮ ಹತ್ತಿರ ಯಾವ

ಮಾರ್ಗದಲ್ಲಿ ಬಸ್ಸುಗಳು ಸಂಚಾರ ಮಾಡುತ್ತಿತ್ತು, ಆ ಮಾರ್ಗಗಳ ಮಾಹಿತಿಗಳನ್ನು ನಮ್ಮ ಅಧಿಕಾರಿಗಳು ನೀಡುತ್ತಾರೆ. ಈಗ ಉದಾಹರಣೆಗೆ ಹೇಳುವುದಾದರೆ ಒಂದು ಮಾರ್ಗದಲ್ಲಿ ಬಸ್ಸುಗಳು ಓಡಾಡುತ್ತಿತ್ತು, ಇವತ್ತು ಬಹಳಷ್ಟು ರಸ್ತೆಗಳು ಹಾಳಾಗಿದ್ದು ಅವುಗಳ ಮಾಹಿತಿಯನ್ನು ನಮಗೆ ಕೊಡುತ್ತಾರೆ. ಆ ಉದ್ದೇಶದಿಂದ ಅಲ್ಲಿ ಬಸ್ ಸಂಚಾರವನ್ನು ನಿಲ್ಲಿಸುವುದೇವೆಂದು ಮಾಹಿತಿಯನ್ನು ಕೊಡುತ್ತಾರೆ. ಆ ಬಗ್ಗೆ ನಾನು ಲೋಕೋಪಯೋಗಿ ಮಂತ್ರಿಯವರಿಗೆ ಪತ್ರ ಬರೆದರೆ ರಸ್ತೆ ದುರಸ್ತಿ ಮಾಡುವುದಕ್ಕೆ ಸಾಧ್ಯವಿಲ್ಲ. ತಾವು ಆ ಕ್ಷೇತ್ರದ ಶಾಸಕರಾಗಿ ಒತ್ತಾಯ ಮಾಡಿದಾಗ ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್ ವ್ಯಾಪ್ತಿಯಲ್ಲಿರಬಹುದು....

ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಏನು ಉತ್ತರವನ್ನು ಕೊಡುತ್ತಿದ್ದಾರೆಂದು ಗೊತ್ತಾಗುವುದಿಲ್ಲ. ಇವರು ನಿನ್ನೆಯೂ ಸಹ ಇದೇ ರೀತಿಯಲ್ಲಿ ಉತ್ತರವನ್ನು ಕೊಟ್ಟರು. ಅವರ ಸರ್ಕಾರದಲ್ಲಿ, ಸಾರಿಗೆ ಮತ್ತು ಲೋಕೋಪಯೋಗಿ ಇಲಾಖೆಗಳು ಇರುವಂಥಾದ್ದು, ಇವು ಬೇರೆ ಬೇರೆಯಾಗಿ ಇವೆಯೇನು?

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಅರಗಜ್ಞಾನೇಂದ್ರರವರು ಹಾಗೂ ಮಾನ್ಯ ಸದಾನಂದ ಗೌಡರು ಒಂದೇ ಆಗುವುದಕ್ಕೆ ಸಾಧ್ಯವೇ? ಅವರ ಕ್ಷೇತ್ರ ಬೇರೆ, ಇವರ ಕ್ಷೇತ್ರ ಬೇರೆ, ಈಗ ಮಾನ್ಯ ಸದಾನಂದಗೌಡರು ತೀರ್ಥಹಳ್ಳಿ ಕ್ಷೇತ್ರದ ಕೆಲಸವನ್ನು ಹೇಳಲಿ ಆ ರೀತಿ ಹೇಳುವುದಕ್ಕೆ ಸಾಧ್ಯವಿದೆಯಾ? ಅದೇ ರೀತಿಯಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟಹಾಗೆ ನಾನು ಹೇಳುತ್ತಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಮಾನ್ಯ ಪಾಟೀಲ್‌ರವರು ಪ್ರಸ್ತಾಪ ಮಾಡಿದ್ದನ್ನು ಹೇಳುತ್ತಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಅದನ್ನೇ ನಿಮ್ಮ ಸ್ನೇಹಿತರಿಗೆ ಹೇಳಿ, ನಾನು ನನ್ನ ಇಲಾಖೆಗೆ ಸಂಬಂಧಪಟ್ಟಿದ್ದನ್ನು ನಾನು ಹೇಳಬಹುದು. ನಾನು ಸಚಿವ ಸಂಪುಟದ ಸದಸ್ಯನಾಗಿ ಸಾರಿಗೆ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದೇನೆ. ತಾವು ಪ್ರತ್ಯೇಕವಾಗಿ ರಸ್ತೆಗಳ ಬಗ್ಗೆ ಮಾಹಿತಿಯನ್ನು ಕೊಡಿ, ನಾನು ಲೋಕೋಪಯೋಗಿ ಇಲಾಖೆಯವರಿಗೆ ಬರವಣಿಗೆಯ ಮೂಲಕ ಕಳುಹಿಸಿಕೊಡುತ್ತೇನೆ.

ಕ್ಷೇತ್ರವಾರು ಆಶ್ರಯ ಯೋಜನೆಯ ಅನುಷ್ಠಾನ.

488(4296) ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.